ಶ್ರೀ ಕಡಿದಾಳ್ ಮಂಜಪ್ಪ.—ಅದು ಮದರಾಸ್ ಗೌರ್ನ್‌ಮೆಂಟಿನ ಮಿಸೆಸ್ ಚಟರ್ಜಿ ಎಂಬುವರಿಗೆ ಮಾತ್ರ ಪ್ರಯೋಜನವಾಗುವುದಾಗಿದೆಯೆಂದೂ ಮತ್ತು ಸರ್ಕಾರದವರಿಗೆ ಹೆಚ್ಚಾಗಿ ಖರ್ಚಾಗುತ್ತಿದೆ ಎಂದೂ ಹೇಳಿ ಪುನರ್ ವಿಮರ್ಶೆ ನಾಡಬೇಕೆಂದು ಸರ್ಕಾರದವರಿಗೆ ದೂರು ಬಂದದ್ದರ ಮೇಲೆ ಇದನ್ನು stay ಮಾಡಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ದೂರು ಸುಳ್ಳು ಅಥವಾ ನಿಜ ಎಂಬುದನ್ನು ವಿಮರ್ಶೆ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತಿದ್ದೇವೆ. ರಿಪೋರ್ಟನ್ನು ಕೇಳಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಸರ್ಕಾರದವರು ಇದನ್ನು ಸ್ಯಾಂಕ್ಷನ್ ಮಾಡಿದಾಗಲೇ ಪರ್ಯಾಲೋಚನೆ ಮಾಡಬೇಕಾಗಿತ್ತಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿತ್ತೋ ಇಲ್ಲವೋ, ನೋಟೀಸ್ ಬೇಕು.

ಆದರೆ ಇನ್ನೊಂದು ವಿಷಯ ಈ ಸಂದರ್ಭದಲ್ಲಿ ಹೇಳುತ್ತೇನೆ. The proposed area to be irrigated is 411 acres and the cost comes to nearly two lakhs of rupees.

———

Water Supply to Lands under Visvesvaraya Canal in Malavalli Taluk.

Q.—227. Sri B. P. NAGARAJA MURTHY (Malavalli).—

Will the Government be pleased to state :—

(*a*) the extent of land under Visvesvaraya Canal in Malavalli Taluk that was not supplied with water ;

(*b*) whether it was not possible to supply water to that area at least to the semi-dry crops by reducing the paddy area ;

(*c*) whether they have taken any steps to give any relief to the atchkatdars of that area ?

A.— Sri Kadidal MANJAPPA (Minister for Revenue and Public Works).—

(*a*) 4,400 acres.

(*b*) No.

(*c*) The question of giving relief is not brought up for consideration.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ 4,400 ಎಕರೆ ಜೊತೆಗೆ ಇನ್ನೂ 5,000 ಎಕರೆಗಳಿಗೆ ನೀರು ತಲಪಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಆ ಪ್ರದೇಶಕ್ಕೆ ತಾವೇ ಸೆಪ್ಟಂಬರ್ ಮಾಹೆಯಲ್ಲಿ ಬಂದು ಖುದ್ದು ಅಜಮಾಯಿಷಿ ಮಾಡಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಆಲ್ಲಿ ಭತ್ತ ಬೆಳೆಯುವ ಪ್ರದೇಶವನ್ನು ಕಡಮೆ ಮಾಡಿ semi-dry ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಮೊದಲೇ ಯೋಚನೆಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಪರಿಹಾರ ಕೊಡುವವರು ತಾವೇ ಖುದ್ದು ನೋಡಿರುವುದರಿಂದ ಬೇರೆ ಯಾರಿಂದಲೂ ಅರ್ಜಿ ಬರಬೇಕಾಗಿಲ್ಲ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಹಾರ ಯಾವುದೂ ಕೊಟ್ಟಿಲ್ಲ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಬೇರೆ ಕ್ಷಾಮ ಪ್ರದೇಶಗಳಿಗೆ ಯಾವ ಪರಿಹಾರ ಕೊಡಬೇಕೋ ಅದನ್ನು ಇಲ್ಲಿಯೂ ಕೊಡಬೇಕಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಕ್ಷಾಮ ಪರಿಸ್ಥಿತಿ ಇದ್ದರೆ ಕ್ಷಾಮ ಪರಿಹಾರ ಕೊಡುತ್ತೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಲ್ಲಿ ಮಳೆ ಬಾರದೆ ನಾಲೆಯಲ್ಲಿ ನೀರು ಇಲ್ಲದಿದ್ದ ಮೇಲೆ ಅದು ಕ್ಷಾಮ ಪ್ರದೇಶ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆ dry crop ಬೆಳೆದಿರಬಹುದು.

ಶ್ರೀ ಹೆಚ್. ಕೆ. ವೀರಣ್ಣ ಗೌಡ (ಮದ್ದೂರು).—ವಿಶ್ವೇಶ್ವರಯ್ಯ ನಾಲೆಯ ಕೊನೆಯ ಪ್ರದೇಶಗಳಾದ ಮಳವಳ್ಳಿ ಮತ್ತು ಶಿಂಷಾ ಪ್ರದೇಶಗಳ ರೈತರಿಗೆ ಕಂದಾಯದ

(ಶ್ರೀ ಹೆಚ್. ಕೆ. ವೀರಣ್ಣಗೌಡ)

ರಿಯಾಯಿತಿ ಕೊಡಬೇಕೆಂದು ಒಂದು ಕಮಿಟಿಯವರು ಶಿಫಾರ್ಸ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಮಳವಳ್ಳಿ ಮತ್ತು ಶಿಂಷಾ ಪ್ರದೇಶಗಳು Tail-end lands ಆಗಿರುವುದರಿಂದ ರಿಯಾಯಿತಿ ಕೊಡಬೇಕೆಂದು ಲಕ್ಷ್ಮಣರಾವ್ ಕಮಿಟಿಯವರು ರಿಪೋರ್ಟು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಲಕ್ಷ್ಮಣರಾವ್ ಕಮಿಟಿ ರಿಪೋರ್ಟು ಬಂದಿದೆ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಆ ರೀಪೋರ್ಟಿನಲ್ಲಿ ಮಳವಳ್ಳಿ ಶಿಂಷಾ ಪ್ರದೇಶಗಳ ರೈತರಿಗೆ 10 ರೂಪಾಯಿ ಕಂದಾಯ ಹಾಕಿರುವುದರಲ್ಲಿ ರಿಯಾಯಿತಿ ತೋರಿಸಬೇಕೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಗಮನದಲ್ಲಿದೆ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಆ ವರದಿ ಬಗ್ಗೆ ಯಾವಾಗ ತೀರ್ಮಾನ ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಕೂಲಂಕಷವಾಗಿ ವಿಮರ್ಶೆ ಮಾಡುತ್ತಿದೆ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಈಗ ಅವರಿಂದ ತರಿ ಕಂದಾಯ ತೆಗೆದುಕೊಳ್ಳುತ್ತಿದ್ದೀರಾ? ಅಥವಾ ಖುಷ್ಕಿ ಕಂದಾಯ ತೆಗೆದುಕೊಳ್ಳುತ್ತಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಹೆಚ್. ಕೆ. ವೀರಣ್ಣಗೌಡ.—ತರಿ ಕಂದಾಯ ತೆಗೆದುಕೊಳ್ಳುತ್ತಿದ್ದರೆ, ಖುಷ್ಕಿ ಕಂದಾಯ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚಿಸುತ್ತೇವೆ.

ಶ್ರೀ ಕೆ. ವಿ. ಶಂಕರಗೌಡ (ಮಂಡ್ಯ).—ಈ 4,400 ಎಕರೆಗಳಿಂದ water rate ಈ ವರ್ಷ ವಸೂಲು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೀರು ಕೊಡದೆ ಇದ್ದರೆ water rate ವಸೂಲು ಮಾಡುವುದಿಲ್ಲ.

Damage by the Rock-burst Accident in Champion Reef Mine.

Q.—260. **Sri K. S. VASAN** (Kolar Gold Fields).—

Will the Government be pleased to state :—

(*a*) the extent of damage to Government and private buildings, residential quarters and offices, hospitals, schools, church, etc., in Champion Reefs caused by the rockburst accident in the top levels of Champion Reef Mine in the month of January 1952 ;

(*b*) the buildings so damaged, the extent of damage in each case, total loss in terms of money to the various parties due to the damage ;

(*c*) whether there was any enquiry into the whole accident to ascertain if the extent of damage was so calamitous due to any act of omission or commission on the part of the Mine Company in underground Mine Support Works ;

(*d*) whether the Government or others concerned have approached the Mine Company for any immediate relief and compensation and if so, with what result ?

A.—**Sri Kadidal MANJAPPA** (Minister for Revenue and Public Works).

(*a*) Information regarding the extent of damage to Government buildings is furnished in the appended statement.

As regards the extent of damage to private buildings, Government have no information.

Note.—It is not possible to collect this information easily and within the allotted time.

(*b*) Please see the abovementioned statement.

(*c*) This question has to be considered by the Central Government.

(*d*) Government have no information as to the steps taken by private parties. So far as Government buildings are concerned, the matter is under consideration.